**ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಮುಧೋಳ**

**ಸಿ.ಸಿ.ನಂ.1018/2018**

...ಫಿರ್ಯಾದಿ.

1) ಕರ್ನಾಟಕ ಸರ್ಕಾರ ಪರವಾಗಿ ಮುಧೋಳ ಪೋ.ಠಾಣೆ.

- ವಿರುದ್ಧ -

2) ಬಸಲಿಂಗಯ್ಯ ತಂದೆ. ಬಸಯ್ಯ ಮಠಪತಿ, ವ: 19 ವರ್ಷ,
3) ವೀರಯ್ಯ ತಂದೆ. ಫಕೀರಯ್ಯ ಮಠಪತಿ, ವ: 21 ವರ್ಷ,

ಇಬ್ಬರೂ ಸಾ: ಸತ್ತಿಗೇರಿ, ಹಾಲಿ: ಯಡಹಳ್ಳಿ, ತಾ: ಮುಧೋಳ. .....ಆರೋಪಿತರು

- - - - -

ದಿ: 21-02-2022
ನಾನು: **ಶ್ರೀಮತಿ. ಸರಸ್ವತಿ ಹೊಟಕರ**
ಬಿ.ಎ., ಎಲ್ ಎಲ್.ಎಮ್.
ಹೆಚ್ಚುವರಿ ಪ್ರ.ದ.ನ್ಯಾ.ದಂ., ಮುಧೋಳ.

ಆದ ನಾನು ಈ ಪ್ರಕರಣದ ಆರೋಪಿಗಳಾದ ನಿಮ್ಮ ಮೇಲ ಈ ಕಳಗಿನಂತ ದೋಷಾರೋಪಣ ಇರುತ್ತದ.

-:: **ದೋಷಾರೋಪಣೆ** ::-

ದಿನಾಂಕ 12-01-2018 ರಂದು ಮಧ್ಯಾಹ್ನ ಸುಮಾರು 11.30 ಕ್ಕೆ ಮುಧೋಳ ಪೋಲಿಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ಮುಧೋಳ ಹೊರ ವಲಯದಲ್ಲಿ ಬರುವ ಮಂಡಬಸಪ್ಪನ ದೇವಸ್ಥಾನದ ಹತ್ತಿರ ಸಾಯಿ ನಗರದ ರಾಯಲ್ ಕಾಲೋನಿಯ ಆಸ್ತಿ ನಂ.142 ಎಚ್ ಪ್ಲಾಟ್ ನಂ.3 ರಲ್ಲಿರುವ (ಚಾಸಾ 14) ಸುವರ್ಣಾ ಗೋಳಶೆಟ್ಟಿಯವರ ಮನೆಯಲ್ಲಿ ಆರೋಪಿ 2 ಮತ್ತು 3 ರವರು ಕೂಡಿಕೊಂಡು ಮಾರ್ತುಲದಿಂದ ಮನೆ ಬಾಗಿಲ ಕೀಲಿ ಕೊಂಡಿ ಮುರಿದು ಒಳಹೊಕ್ಕು ಕಾರಾಗೃಹ ವಾಸದ ಶಿಕ್ಷೆಗೆ ಗುರಿ ಮಾಡುವಂತಹ ಅಪರಾಧವನ್ನು ಮಾಡಲು ಹೊಂಚುಹಾಕಿ ಮನೆ ಅತ್ರಿಕ್ರಮಣ ಮಾಡಿದ್ದೀರಿ. ಈ ಮೇರೆಗೆ ನೀವು ಭಾ.ದಂ.ಪ್ರ.ಸಂ.ಕಲಂ. 454 ರ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

2) ಮೇಲೆ ಹೇಳಿದ ಸ್ಥಳ, ದಿನಾಂಕ ಹಾಗೂ ವೇಳೆಯಲ್ಲಿ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆರೋಪಿಗಳಾದ ನೀವು ಚಾಸಾ 14 ರವರ ಮನೆ ಹೊಕ್ಕು ಅವರ ಬೆಡ್ ರೂಮನ ಟ್ರಂಕನಲ್ಲಿ ಇಟ್ಟಿದ್ದ ಚಾರ್ಜಸೀಟ ನಂ.11 ರಲ್ಲಿ ನಮೂದು ಮಾಡಿದ ಸ್ವತ್ತಿನ ಪಟ್ಟಿ ನಂ.10/18 ರಲ್ಲಿ ನಮೂದು ಮಾಡಿದ ಅ.ನಂ.1, 2,3, 11, 12, 18, 19, 21, 26, 27 ಹಾಗೂ 31 ನೇದವುಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತೀರಿ. ಆಮೇರೆಗೆ ನೀವು ಭಾ.ದಂ.ಸಂ. 380 ರ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲ್ಕಾಣಿಸಿದ ದೋಷಾರೋಪಣೆಗಾಗಿ ನಿಮ್ಮಗಳ ಮೇಲೆ ವಿಚಾರಣೆಯಾಗಲು ಆದೇಶಿಸುತ್ತೇನೆ.

ಪ್ರಶ್ನೇ: 1) - ಈ ಆಪಾದನೆಯನ್ನು ಓದಿ ಹೇಳಿದ್ದು ನಿಮಗೆ ತಿಳಿಯಿತೇ?
ಉತ್ತರ- (1) ರಿಂದ (6) ತಿಳಿಯಿತು.

Scanned with CamScanner

No: 1049
Dt: 16-08-1

ಪ್ರಶ್ನೇ:  2) - ಅಪಾದನೆ ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ ?
ಉತ್ತರ- (1) ರಿಂದ (6) ಸುಳ್ಳು, ವಿಚಾರಣೆಯಾಗಬೇಕು.

(ಆರೋಪಿತರಿಗೆ ದೋಷಾರೋಪಣೆಯ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಓದಿ ಹೇಳಿ ವ ಕೇಳಿ ಅವರು ತಿಳಿದುಕೊಂಡು ನಂತರ ಕೊಟ್ಟ ಉತ್ತರವನ್ನು ನಮೂದಿಸಲಾಯಿತು.)

ಓ ಹೇ ಕೇ ಸರಿ ಇದೆ.

21/02/22

ದಿನಾಂಕ: 21.02.2022.  ಹೆಚ್ಚುವರಿ ಜೆ.ಎಂ.ಎಫ್.ಸಿ., ಮುಧೋಳ.

2) ಬಸಲಿಂಗಯ್ಯ ತಂದೆ. ಬಸಯ್ಯ ಮಠಪತಿ,

3) ವೀರಯ್ಯ ತಂದೆ. ಫಕೀರಯ್ಯ ಮಠಪತಿ,

Scanned with CamScanner